ಪ್ರಧಾನ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ
ಹುಮನಾಬಾದ.

ಸಿ.ಸಿ ನಂ.4735/2023
ಸಿ.ಡಬ್ಲ್ಯೂ.1 ಪಿ.ಡಬ್ಲ್ಯೂ.1

| | | |
|---|---|---|
| ಹೆಸರು | : | ಶಿವಾನಂದ |
| ತಂದೆಯ ಹೆಸರು | : | ಶಂಕ್ರೆಪ್ಪಾ ಜಮ್ಮು |
| ವಯಸ್ಸು | : | 54- ವರ್ಷ |
| ಉದ್ಯೋಗ | : | ಒಕ್ಕಲುತನ |
| ವಾಸ | : | ಹುಮನಾಬಾದ. |

ದಿನಾಂಕ: 04-11-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ. ರವರಿಂದ:</u>

ಚಾಸಾ-5 ನನ್ನ ಹೆಂಡತಿ. ಚಾಸಾ-2 ರಿಂದ 4, 6 ಮತ್ತು 7 ರವರ ಪರಿಚಯ ಇರುತ್ತದೆ. ಆರೋಪಿತನ ಪರಿಚಯ ಇರುತ್ತದೆ. ಸುಮಾರು ಎರಡು ವರ್ಷಗಳ ಹಿಂದೆ ಸಾಯಂಕಾಲ 7.30 ರಿಂದ 8.00 ಗಂಟೆ ಅವಧಿಯಲ್ಲಿ ನಾನು ಮನೆಯ ಹೊರಗೆ ನಡೆದಾಡುತ್ತಾ ಇದ್ದೇನು, ಆರೋಪಿ ಮತ್ತು ಅವರ ತಾಯಿ, ತಂಗಿ ಸೇರಿ ನಮ್ಮ ಮನೆಗೆ ಬಂದು ಚಾಸಾ-5 ರವರೊಂದಿಗೆ ಜಗಳ ತೆಗೆದು ಚಾಸಾ-5 ರವರಿಗೆ ಹೊಡೆದು ಹೋಗಿರುತ್ತಾರೆ. ನನಗೆ ಕರೆ ಮಾಡಿ ಹೇಳಿದ ನಂತರ ನಾನು ಮನೆಗೆ ಹೋಗಿರುತ್ತೇನೆ. ನಾನು ಆರೋಪಿಗೆ ಯಾವುದೇ ಹಣ ಬಾಕಿ ಕೊಡುವುದುದು ಇರುವುದಿಲ್ಲ ಅಂತಾ ಹೇಳಿರುತ್ತೇನೆ. ನಾನು ಆರೋಪಿತನಿಗೆ ಎಲ್ಲಾ ಹಣವನ್ನು ಅವರ ತಾಯಿಗೆ ನೀಡಿರುತ್ತೇನೆ ಅಂತಾ ಹೇಳಿರುತ್ತೇನೆ. ಆಗ ಆರೋಪಿಯು ಒಮ್ಮೆಲೆ ನನ್ನ ಮೇಲೆ ಅಟ್ಯಾಕ ಮಾಡಿರುತ್ತಾನೆ.

ನಂತರ ಜನರು ಜಗಳ ಬಿಡಿಸಿರುತ್ತಾರೆ ನಾನು ಆಸ್ಪತ್ರೆಗೆ ಹೋಗಿರುತ್ತೇನೆ ಆದಾದ ನಂತರ ಏನೂ ಆಗಿರುತ್ತದೆ ನನಗೆ ಗೊತ್ತಿಲ್ಲ. ಆರೋಪಿಯು ನನಗೆ ಕಬ್ಬಿಣದ ಪಂಚಿನಂತ ವಸ್ತುವಿನಿಂದ ನನಗೆ ತಲೆಗೆ ಹೊಡೆದಿರುತ್ತಾನೆ. ಇದಾದ ನಂತರ ನಾನು ದೂರನ್ನು ಅದೇ ದಿನ ನೀಡಿರುತ್ತೇನೆ. ನಂತರ ಪೋಲಿಸರು ಬಂದು ಪಂಚನಾಮೆಯನ್ನು ಮಾಡಿಕೊಂಡು ಹೋಗಿರುತ್ತಾರೆ. ಮುಂದೇನಾಯಿತು ನನಗೆ ಗೊತ್ತಿಲ್ಲ.

ಈಗ ನೋಡುತ್ತಿರುವ ದಾಖಲೆಯು ನಾನು ನೀಡಿದ ದೂರು ಆಗಿರುತ್ತದೆ ಅದನ್ನು ಈಗ ನಿ.ಪಿ.-1 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ.-1(ಎ) ಎಂದು ಗುರುತಿಸಲಾಯಿತು.

ಈಗ ನೋಡುತ್ತಿರುವ ವಸ್ತುವು ನನ್ನ ಮೇಲೆ ಹಲ್ಲೆ ಮಾಡಿದ ಪಂಚ ಆಗಿರುತ್ತದೆ ಅದನ್ನು ಈಗ ಮು.ಮಾ.-1 ಎಂದು ಗುರುತಿಸಲಾಯಿತು.

ಆರೋಪಿತನನ್ನು ನೋಡಿದ್ದರೆ ಗುರುತಿಸುತ್ತೇನೆ. ಆರೋಪಿಯು ಗೈರು ಹಾಜರಿದ್ದು ಆತನ ಗುರುತಿಸುವಿಕೆಗೆ ಯಾವುದೇ ಆಕ್ಷೇಪಣೆಗಳು ಇರುವುದಿಲ್ಲ ಅಂತಾ ಆರೋಪಿತರ ವಕೀಲರು ನಿವೇದಿಸಿಕೊಂಡಿರುತ್ತಾರೆ.

(ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆ ಪ್ರಕರಣಕ್ಕೆ ಭಾಗಶಃ ವ್ಯತರಿಕ್ತವಾಗಿ ಸಾಕ್ಷಿ ನುಡಿದಿದ್ದರಿಂದ ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸ.ಸ.ಅ ರವರು ಕೋರಿಕೊಂಡಿರುತ್ತಾರೆ. ಕಡತಗಳನ್ನು ಪರಿಶೀಲಿಸಿ, ಆಲಿಸಿ, ಅನುಮತಿಯನ್ನು ನೀಡಲಾಯಿತು.)

<u>ಪಾಟೀ ಸವಾಲು : ಮಾನ್ಯ ಸ.ಸ.ಅ.ರವರಿಂದಃ</u>

ದಿ:19-04-2023 ರಂದು ರಾತ್ರಿ 8.00 ಗಂಟೆಗೆ ನಮ್ಮ ಓಣಿಯ ಚರ್ಚ ಹತ್ತಿರದಿಂದ ರಸ್ತೆಯ ಮೇಲೆ ಹೋಗುವಾಗ ಆರೋಪಿಯು ನನಗೆ ಮುಂದೆ ಹೋಗದಂತೆ ಅಡ್ಡ ಗಟ್ಟಿ ತಡೆದು ಅವಾಚ್ಯ ಶಬ್ದಗಳಿಂದ ಬೈದಿರುತ್ತಾನೆ ಎಂದರೆ ಸರಿ. ಸದರಿ ಜಗಳವನ್ನು ಚಾಸಾ-4 ರಿಂದ 7 ರವರು ಬಿಡಿಸಿರುತ್ತಾರೆ ಎಂದರೆ ಸರಿ. ಆರೋಪಿಯು ನನಗೆ ಜೀವ ಬೆದರಿಕೆ ಹಾಕಿರುತ್ತಾನೆ ಎಂದರೆ ಸರಿ. ನಾನು ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಪಡೆದ ನಂತರ ದಿನಾಂಕ: 25-04-2023 ರಂದು ಠಾಣೆಗೆ ಹಾಜರಾಗಿ ದೂರನ್ನು ಸಲ್ಲಿಸಿರುತ್ತೇನೆ ಎಂದರೆ ಸರಿ.

<u>ಪಾಟೀ ಸವಾಲು: ಶ್ರೀ. ಆರ್.ಜಿ.ಎನ್. ಆರೋಪಿ ಪರ ವಕೀಲರವರಿಂದಃ</u>

ಆರೋಪಿಯು ನನ್ನ ಸಂಬಂಧಿಕ ಆಗಿರುವುದರಿಂದ ಪರಿಚಯ. ಸದರಿ ಜಗಳವು ಮನೆಯ ಮುಂದೆ ಆಗಿರುತ್ತದೆ. ನಿ.ಪಿ.-1 ರಲ್ಲಿ ಮನೆಯ ಮುಂದೆ ಜಗಳ ಆಗಿರುತ್ತದೆ ಅಂತಾ ಬರೆಸಿರುತ್ತೇನೆ. ದೂರನ್ನು ನಾನು ಜಗಳ ಆದ ದಿನವೇ ನೀಡಿರುತ್ತೇನೆ. ಜಗಳವು 7.30 ರಿಂದ 8.00 ಗಂಟೆ ಅವಧಿಯಲ್ಲಿ ಆಗಿರುತ್ತದೆ. ಘಟನೆ ನಡೆದ ಸ್ಥಳದಿಂದ ಸುಮಾರು 20 ನಿಮಿಷದಲ್ಲಿ ಆಸ್ಪತ್ರೆಗೆ ಹೋಗಬಹುದು. ಘಟನೆ ನಡೆದ ನಂತರ ಸುಮಾರು 10-15 ನಿಮಿಷಕ್ಕೆ ನಾನು ಆಸ್ಪತ್ರೆಗೆ

ಹೋಗಿರುತ್ತೇನೆ ಎಂದರೆ ಸರಿ. ಆರೋಪಿತನ ಹತ್ತಿರ 5,000/- ರೂಪಾಯಿ ಹಣವನ್ನು ಯಾರಿಗೆ ಕೊಡೆಸಿರುತ್ತೇನೆ ಅವರ ಹೆಸರು ನನಗೆ ನೆನಪಿಲ್ಲ.

ಆರೋಪಿತನ ಕಡೆಯಿಂದ ನಾನು ಹಣವನ್ನು ಪಡೆದು ಮರಳಿ ನೀಡಬೇಕಾಗುತ್ತದೆ ಎಂದು ಸುಳ್ಳು ದೂರನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಯ ವಿರುದ ಸುಳ್ಳು ದೂರನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿ ಯಾವುದೇ ಹೊಡೆ ಬಡೆ ಮತ್ತು ಅವಾಚ್ಯ ಶಬ್ದಗಳಿಂದ ಬೈದಿಲ್ಲ ಎಂದರೆ ಸರಿಯಲ್ಲ. ಯಾವುದೇ ಘಟನೆ ನಡೆದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ: ಇಲ್ಲ

(ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಅ.

ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ
ನ್ಯಾಯಿಕ ದಂಡಾಧಿಕಾರಿಗಳು, ಹುಮನಾಬಾದ.